SATYAVADI Founded
The Oldest Newspaper of Mysore

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 31 ಸಂಚಿಕೆ 211] ಬುಧವಾರ 28—7—48 [ಬಿಡಿ ಪ್ರತಿ 3 ಪೈ

ಹೈದರಾಬಾದಿಗೆ ಮುಸ್ಲಿಂರ ಸಹಾಯವಿಲ್ಲ

ಪಾಕಿಸ್ತಾನ ಪ್ರಶ್ನೆಯಲ್ಲಿ ಐಕ್ಯಕ್ಕೆ

ನಾಯಕರು ಒಪ್ಪಲಾರರು

ನ್ಯೂಯಾರ್ಕ್ ಜು. 26—ಭಾರತಕ್ಕೆ ಇರುವ ಸಮಸ್ಯೆ ಹೈದರಾಬಾದ್ ಕಾಶ್ಮೀರ ಮಾತ್ರ ಎಂದು ಸಂಯುಕ್ತ ಸಂಸ್ಥಾನದ ಭಾರತ ರಾಯಭಾರಿ ಸರ್ ರಾಮರಾಯರು ತಿಳಿಸುತ್ತಾ "ವಿಭಜನೆ ತೀರ್ಮಾನಿಸಲ್ಪಟ್ಟ ವಿಷಯ ಪಾಕೀ ಸ್ಥಾನನೇ ಪುನಃ ಐಕ್ಯವಾಗಬೇಕೆಂದು ಇಚ್ಛಿಸಿದರೂ, ಈ ಘಟ್ಟದಲ್ಲಿ ಭಾರತ ನಾಯಕರು ಒಪ್ಪುತ್ತಾರೆಂದು ನಾನು ಯೋಚಿಸಲಾರೆ. ನೆಹರುರವರು ಹಾಗೆ ಹೇಳಿದ್ದಾರೆ" ಎಂದರು.

——

ವಿವಿಧ ವಿಷಯ

(1) ಲಕ್ಷ ವ್ಯಾಧಿ ನಿವಾರಣೆಯ ನಿಮಿತ್ತವಾಗಿ ಪ್ರಥಮ ಚಿಕಿತ್ಸಾಲಯವು ಎಡಿಬರೋನಲ್ಲಿ 60 ವರ್ಷಗಳ ಹಿಂದೆ ಒಬ್ಬ ಸ್ಕಾಟಿಷ್ ವೈದ್ಯನಿಂದ ಪ್ರಾರಂಭಿಸಲ್ಪಟ್ಟಿತು.

(2) ಒಂದು ಟನ್ನು ಕಂಚಿನಿಂದ 448 ಪೌಂಡುಗಳ ಬೆಲೆಯುಳ್ಳ ಪೆನ್ನೀಗಳು(ಇಂಗ್ಲೆಂಡಿನ ನಾಣ್ಯಗಳಲ್ಲಿ ಒಂದು) ತಯಾರಿಸಲ್ಪಡುವವು.

(3) ಬ್ರಿಟನ್ನಿನಲ್ಲಿಯ ಒಂದು ರೈಲ್ವೆ ಶೆಡಿನಲ್ಲಿ 58 ಅಕ್ಷರ

(4) ಉಪ್ಪಪಕ್ಷಿಯು ಮೊಟ್ಟೆಗಳ ರವು ಸ್ಪತಿ ಒಂದು ಮೂರು ಪೌಂ ಗಳಿರುತ್ತವೆ.

(5) 'ವಾನಿಲಾವೈಕ್' ಎಂಬ ಪರಿಳವನ್ನೀಯುವ ಗಿಡಕ್ಕೆ ಭೂ ವಿ ಳಗೂ ಭೂಮಿಯು ಮೇಲೆಯೂ ಡ ಬೇರುಗಳಿರುತ್ತವೆ.

(6) ನಾವೆಲ್ಲರೂ ಉಪಯೋಗಿಸುವ ಕಲ್ಲನ್ನು ಮೊದಲು 1885 ರಲ್ಲಿ ಒಬ್ಬ ಟಿಷ್ ಕಮ್ಮಾರ, ಮಾಕ್ಕಿರ್ಲ ಸ್ಮಾ ಎಂಬ ಇಂಗ್ಲೀಷಿನವನೂ ಕಲೆತು ಹಿಡಿದರು.

(7) ಸ್ತ್ರೀಯರಿಗೆ ಒಟಿಂಗು ಹಕ್ಕು ಶ್ಯಕವೆಂದು ಆಂದೋಳನವನ್ನು ಮಾ ವಳು ಮಿಸೆಸ್ ಪಾಂಕ್ ಹರ್ಸ್ಟ್ ಳ ಯುವತಿಯು.

(8) ಸಾಪೇಕ್ಷ್ಯತೆ ಸಿದ್ಧಾಂತ ನ್ನು ಕಂಡು ಹಿಡಿದ ವಿಜ್ಞಾನಿಯು ಸ್ಟೈನ್.

(9) ಬ್ಲೂ ನೈಲ್, ವೈಟ್ ನೈಲ್ ಬ ಎರಡು ನದಿಗಳು ಖಾರ್ಟೂಂ ಬ್ರ ಸ್ಥಳದಲ್ಲಿ ಸಂಗಮವಾಗುತ್ತವೆ.

ಪಂ|| ನೆಹರು ಪ್ರವಾಸ ಮುಕ್ತಾಯ

ಮದರಾಸು, ಜು 27—ಪಂ|| ನೆಹರುರವರ ಮದರಾಸಿನ 3 ದಿವಸ ಕಾರ್ಯಕ್ರಮ ಮುಗಿದು ದೆಹಲಿಗೆ ಹಿಂದಿರುಗಿದರು. ಸೆಂಟ್ ಥಾಮಸ್ ಮೌಂಟ್ ನಲ್ಲಿ ಜರುಗಿದ ಸ್ವಾಗತ ಸಭಾರಂಭದಲ್ಲಿ ಪಂ|| ನೆಹರು ಭಾಷಣ ಮಾಡುತ್ತಾ, ಭಾರತವನ್ನು ಭದ್ರತೆ, ಸಂಘಟನೆ ಮತ್ತು ಶಕ್ತಿಯುತವನ್ನಾಗಿ ಮಾಡುವುದೇ ಪ್ರಪ್ರಥಮ ಕಾರ್ಯ ಎಂದಿದ್ದಾರೆ. ಪೋಲೀಸರು ಮತ್ತು ಪ್ರಜೆಗಳು ಸಹಕರಿಸಿ ಕೆಲಸ ಮಾಡಿದ್ದಾರೆ ಎಂದು ತನ್ನ ನಿರ್ಗಮನ ಸಂದೇಶದಲ್ಲಿ ತಿಳಿಸಿದ್ದಾರೆ.

ಬ್ರಿಟಿಷ್ ರಾಜರಿಗೆ ನಿಜಾಂ ಪತ್ರ

ಸರ್ಕಾರೀ ಪ್ರಕಟಣೆ

ಹೈದರಾಬಾದ್ ಜು 26—ಬ್ರಿಟಿಷ್ ರಾಜರಿಗೆ ನಿಜಾಂರು ಕಳಿಸಿದ್ದ ಪತ್ರದ ಬಗ್ಗೆ ಹೈದರಾಬಾದ್ ಪ್ರಭುತ್ವ ಪತ್ರಿಕಾ ಪ್ರಕಟಣೆಯೊಂದು, ಬಕಿಂಗ್ ಹಾಂ ಅರಮನೆಗೆ ತಲಪಿಸುವ ಬಗ್ಗೆ ಸರ್ ವಾಲ್ಟರ್ ಮಾಂಕ್ಟನ್ನರ ಅಪ್ತ ಕಾರ್ಯದರ್ಶಿ ಎಂ|| ರಿಚರ್ಡ್ ಒ'ಮೌಂಟರು ನಿಜಾಂರ ಪತ್ರ ತೆಗೆದುಕೊಂಡು ಹೋದರು. ಬ್ಯೂಮೌಂಟ್ ದೆಹಲಿ ತಲುಪಿದಾಗ ಕಸ್ಟಂ ಅಧಿಕಾರಿಗಳಿಂದ ತಡೆಯಲ್ಪಟ್ಟರು. ಅವರ ಸ್ವತ್ತುಗಳನ್ನೆಲ್ಲಾ ಶೋಧಿಸಲಾಯಿತು. ಎಲ್ಲಾ ಕಾಗದಗಳನ್ನು ಓದಲಾಯಿತು. ಮತ್ತು ಅವರ ಕಿಸೆಯೊಳಗಿದ್ದ ನಿಜಾಂರ ಪತ್ರವನ್ನು ಓದಲಾಯಿತು ಎಂದು ತಿಳಿಸಿದೆ.

ಕಾಕ್ಸ್‌ರರ ಮೇಲೆ ಟೇರ್ ಗ್ಯಾಸ್

ನವದೆಹಲಿ, ಜು 26—ಘಾತೇಪುರ ಮಸೀದಿಯನ್ನು ಬಿಟ್ಟು ಹೊರಡಲು ತಿರಸ್ಕರಿಸಿದ ಕಾಕ್ಸ್‌ರರನ್ನು ಜಡುರಿಸಲು ಪೋಲೀಸರು ಟೇರ್‌ಗ್ಯಾಸನ್ನು ಉಪಯೋಗಿಸಿದರು, 60 ಕಾಕ್ಸ್‌ರರ್ ದಸ್ತಗಿರಿಯಾಗಿದೆ.

ರಾಜೀನಾಮೆ ಅಂಗೀಕೃತವಾಯಿತು

ಹೈದರಾಬಾದ್, ಜು 27—ಶ್ರೀ ಪಿ. ವಿ. ಜೋಷಿಯವರ ರಾಜೀನಾಮೆಯನ್ನು ನೈಜಾಂರು ಅಂಗೀಕರಿಸಿದ್ದಾರೆ ಅವರ ಖಾತೆಯನ್ನು ಪಿಂಗಳಿ ವೆಂಕಟರಾವ ರೆಡ್ಡಿ ನೋಡಿಕೊಳ್ಳುವರು.

ಅನಾವರಣೋತ್ಸವ

ಮೈಸೂರು, ಜು 28 — ಮೈಸೂರು ನಗರ ಗೃಹ ನಿರ್ಮಾಣ ಪರಸ್ಪರ ಸಹಾಯ ಸಂಘದ ಚರಿತ್ರೆಯಲ್ಲಿ ಈ ದಿನ ಶುಭದಿನ.

ಮಾನ್ಯ ಸಚಿವ ಶ್ರೀ ಸಿದ್ದಯ್ಯನವರು ಮಹಾತ್ಮ ಗಾಂಧೀಜೀಯವರ ಭಾವಚಿತ್ರವನ್ನೂ, ಮಾನ್ಯ ಸಚಿವ ಶ್ರೀ ಹೆಚ್. ಸಿ ದಾಸಪ್ಪನವರು ಶ್ರೀಮನ್ಮಹಾರಾಜರವರ ಭಾವಚಿತ್ರ ಅನಾವರಣ ಮಾಡಿ ಈ ಮಹಾವ್ಯಕ್ತಿಗಳ ಗುಣಗಾನ ಮಾಡಿದರು.

ಮಂತ್ರಿವರ್ಯರಿಗೆ ಸುಸ್ವಾಗತನೀಡಲಾಯಿತು.

ಶ್ರೀ ಪಾಲಹಳ್ಳಿ ಸೀತಾರಾಮಯ್ಯ ನವ

ಹೈದರಾಬಾದಿ ಮುಸ್ಲಿಂರ ಸಹಾಯ

ಕಲ್ಕತ್ತಾ, ಜು 26 — ಬಂಗಾಳದಲ್ಲಿ ಮುಸ್ಲಿಮರು ಮುಸ್ಲಿಲ್ಲಿ ಮತ್ತು ಖಾಸಗೀ ಸಭೆಗಳಲ್ಲಿ ಹೈದರಾಬಾದಿಗೆ ಸಹಾಯ ಮಾ ಏರ್ಪಾಡಿಸಲ್ಲಿದ್ದಾರೆ ಎಂಬುದ ಡಿತಾ ಅಥಾವಿಲ್ಲ ಎಂದು ಮಾಜೀ ಪ್ರಧಾನಿ ಶ್ರೀ ಹೆಚ್ ಸುಹ್ರಾವರ್ದಿ ಹೇಳಿಕೆಯಿತ್ತಿದ್ದಾ ಲ್ಕತ್ತಾ ಮುಸ್ಲಿಮರ ಮತ್ತು ಪ ಬಂಗಾಳದ ಮುಸ್ಲಿಂ ಪ್ರತಿನಿಧಿಗಳ ಪ್ರಾಯ ಪರೀಕ್ಷಿಸಲಾಗಿ ಅವರಿಗೆ ಸ ಧ್ಯವಾದ ಯಾವ ಬಗೆಯಲ್ಲೂ ಸಹ ಹೈದರಾಬಾದಿಗೆ ಸಹಾಯ ಮಾಡಲು ಇ ಲ್ಲ ಎಂದು ನಾನು ನಂಬಿ ಹೇಳುತ್ತೇನೆ ಎಂದು ಅವರು ತಿಳಿಸಿದ್ದಾರೆ.

ಕಾಶ್ಮೀರಲ್ಲಿ

ನವದೆಹಲಿ ಜು. 26—ಹೊಸ ಸಹಾಯ ಮತ್ತೆ ಒದಗಿದ್ದರಿಂದ ಧಾಳಿಕಾರರ ಚಳವಳಿಗೆ ಚರೋತಿ ಭಾಗೆದಲ್ಲಿ ಜೋರಾಗಿದೆ—200 ಧಾಳಿಕಾರರು ಹತ ಮಾಡಲ್ಪಟ್ಟು ಹೆಚ್ಚು ಪರಿಮಾಣದಲ್ಲಿ ಸರಕು ವಶಪಡಿಸಿಕೊಳ್ಳಲಾಗಿದೆ.

ವು ಡ್ ಲ್ಯಾಂಡ್ಸ್

26—7—48 ರಿಂದ

ಹುಸ್ನೆಬಾನೊ — ಯಶ್ವಂತ ಧ

ಪಾತ್ರವಹಿಸಿರುವ

ರಾ ಯ

ರಾಷ್ಟ್ರಗಳ
ಬಗೆ ಸೇರಿದ
ಹೋವರ್ಡ್
ಗಾರನು ಆಫೀಸಿ
ನನ್ನು ಬೆಳಿಸಿದ್ದಾನೆ.
ದ ಎಲ್ಲಾ ರಾಷ್ಟ್ರ
ದು ನೋಡಿಕೊಂಡು
ತ್ತಾನೆ. ಅದರ ಹೆಸರು
ಹಾಲು ಮೊಟ್ಟೆ, ಸೂಪ್
ಗಳನ್ನು ತಿಂದು ಬೆಳೆಯುತ್ತಿದೆ

ಅದಮಾರ್ ಮಠ

ಮಠಗಳಲ್ಲೊಂದಾದ ಅದ
ಮಠದ ಶ್ರೀ ವಿಭುಧೇಶತೀರ್ಥ
ಾದಂಗಳವರು ಕಳೆದ ತಾ|| 14
ಅತ್ಯಂತ ಎಜ್ಜಂಭಣೆಯಿಂದ
ಗಳ ಆರಾಧನೆಯನ್ನು ನೆರವೇರಿಸಿ
ಅಸಂಖ್ಯಾತ ಬ್ರಾಹ್ಮಣರಿಗೆ
ರಿ ಭೋಜನ ಮಾತ್ರವಲ್ಲದೆ ಯಥೇ
ದಾನ ಧರ್ಮ ದಕ್ಷಿಣೆಗಳನ್ನೂ
ಾಡಿದರು. ಮರು ದಿನ ಬಡಬಗ್ಗರಿ
ಾಗಿ ಊರ ಛತ್ರದಲ್ಲಿ ಭೋಜನದ
ರ್ಪಾಡೂ ಮಾಡಿದ್ದರು

ಸಾಹಿತ್ಯ ಸೇವೆ

ಅಷ್ಟಾದಶ ಮಹಾ ಪುರಾಣಗಳಲ್ಲಿ
ಂದಾದ ಶ್ರೀ ದೇವೀ ಭಾಗವತ ಪುರಾ
ಣವನ್ನು, ಕರ್ಣಾಟಕ ಶಂಕರ ವಿಜಯ
ಮೊದಲಾದ ಗ್ರಂಥಗಳನ್ನು ವಿರಚಿಸಿ
ಪ್ರಸಿದ್ಧರಾಗಿರುವ ಪೌರಾಣಿಕ ಸಾಲಿ
ಗ್ರಾಮ ಶ್ರೀಕಂಠಶಾಸ್ತ್ರಿಗಳೆಂಬು
ವರು ಕನ್ನಡ ಭಾಮಿನೀಷಟ್ಪದೀ ರೂಪ
ವಾಗಿ 14,050 ಪದ್ಯಗಳಾಗಿ ಹೊಸ
ದಾಗಿ ವಿರಚಿಸಿರುವರು. ಕನ್ನಡ ಷಟ್ಪದೀ
ಕಾವ್ಯಗಳಲ್ಲಿ ಒಬ್ಬ ಕವಿಯು ಇಷ್ಟು
ದೊಡ್ಡ ಗ್ರಂಥವನ್ನು ಬರೆದಿರುವುದಕ್ಕೆ
ಇದೇ ಮೊದಲು. ಇವರು ಗ್ರಂಥ ಶಾಂ
ತಿಗಾಗಿ ಸಧ್ಯದಲ್ಲಿ ದೇವೀ ಯಾಗ
ವೊಂದನ್ನು ರಚಿಸಿ ಅನಂತರ ಮುದ್ರಣ
ಪ್ರಯತ್ನ ಮಾಡುವರೆಂದು ತಿಳಿಯ
ಬಂದಿದೆ.

At Opera

24—7—48 ರಿಂದ

ಸ್ಪ್ರತ್ ವಾಲಿ

ಮುಂದಿನ]

ನರ್ತಕಿಯೊಡನೆ ರಜಕಾರರ ಗುಪ್ತ ಸಂಚಾರ

ಹೈದರಾಬಾದಿಂದ ಐದು ಜನ ರಜಕಾರರು ನರ್ತಕಿಯೊಡನೆ ಸೇರಿಕೊಂಡು ಮುಧ್ಯಸ್ಥಾಂತದಲ್ಲಿ ಹಿಂದು ಜನರಲ್ಲಿ ಸಂಚರಿಸುತ್ತಾ, ಗುಪ್ತ ಪ್ರಚಾರ ನಡಿಸಿದ್ದರು. ಸೈನಿಕ ಮಹತ್ವದ ಮಾಹಿತಿಯನ್ನು ಕೂಡಿಸುತ್ತಾ, ಹೈದರಾಬಾದಿಗೆ ತಿಳಿಸುತ್ತಿದ್ದರು. ಭಾರತವು ಹೈದರಾಬಾದದ ಮೇಲೆ ದಾಳಿ ಮಾಡಿದರೆ, ಪಾಕಿಸ್ತಾನವು ಭಾರತದ ಮೇಲೆ ದಾಳಿ ಮಾಡುವದೆಂದು ಪ್ರಚಾರ ಮಾಡುತ್ತಿದ್ದರು ಹಿಂದು ಉಡುಪು ಧರಿಸಿ ಹಿಂದು ಹೆಸರು ಇಟ್ಟುಕೊಂಡಿದ್ದರು. ಇವರೊಡನೆ ಒಬ್ಬ ಹಿಂದು ನರ್ತಕಿ ಹಿಂದು ವೊಬ್ಬನು ಇದ್ದರು ಇವರನ್ನು ಪೋಲೀಸರು ಹಿಡಿದು ಹಾಕಿದ್ದಾರೆ.

ಂ ಂ

ಇಸ್ರೈಲ್ ರಾಜ್ಯ

ಇಸ್ರೈಲ್ ರಾಜ್ಯಕ್ಕೆ ಮೂರು ಕಡೆಗಳಲ್ಲಿಯೂ ಶತ್ರುಗಳಾದ ಅರಬ್ಬಿಯವರು ಇದ್ದಾರೆ. ಪ್ಯಾಲಿಸ್ಟೈನಿನಲ್ಲಿ ಅರಬ್ಬರ, ಯಾಹೂದ್ಯರ ಮತ್ತು ಕ್ರಿಶ್ಚಿಯರ್ಯರ ಪವಿತ್ರ ಸ್ಥಾನಗಳಿವೆ ಈ ಮೂರು ಮತಗಳವರೂ ಶಾಂತಿಯೊಡನೆ ವರ್ತಿಸಿ ಆ ದೇಶವು ಯುದ್ಧದಿಂದ ಹಾಳಾಗದೆ ನೋಡಿಕೊಳ್ಳಬೇಕಾದದ್ದು ಕರ್ತವ್ಯವಾಗಿರುತ್ತದೆ. ಪ್ರತಿ ಜನಾಂಗವೂ ಸ್ವತಂತ್ರತೆಯನ್ನು ಅಪೇಕ್ಷಿಸುವ ಈ ಯುಗದಲ್ಲಿ ಯಹೂದ್ಯರು ಕೂಡ ಸ್ವತಂತ್ರ ಪ್ರೇಮಿಗಳಾಗಿರುವುದು ಸಹಜವೇ ಆಗಿದೆ.

ಂ ಂ

ಆಲೂಗಡ್ಡೆಯ ಹಿಟ್ಟು

ಸಂಯುಕ್ತ ಅಮೆರಿಕವು ಸಾಧಾರಣವಾಗಿ ವರ್ಷಂಪ್ರತಿ 15 ಮಿಲಿಯ ಪೌಂಡುಗಳ ಆಲೂಗಡ್ಡೆಯ ಹಿಟ್ಟನ್ನು ತಯಾರಿಸುತ್ತದೆ. ಈಗ ಅದನ್ನು ಹತ್ತರಷ್ಟು ಹೆಚ್ಚಾಗಿ ತಯಾರಿಸಲು ನಿರ್ಧರಿಸಿದೆ. ಈ ವರ್ಷ ಈ ಯೋಜನೆಯನ್ನನುಸರಿಸಿ 150 ಮಿಲಿಯ ಪೌಂಡುಗಳ ಹಿಟ್ಟು ತಯಾರಿಸಲ್ಪಟ್ಟು ಜರ್ಮನ್ನಿಗೆ ಕಳುಹಿಸಲ್ಪಡುವದು.



ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧ

ಶ್ರೀ 'ಓಂ' ಗುರುತಿನ ಕೇಸ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾ
ಸ್ಪೇನಿನ ಕೇಸರಿ ಗಿಡಗಳಲ್ಲಿಯ ಹೂಗಳಿಂದ ಆರಿಸಿ ತೆಗೆದುದಾಗಿದ. ನವಿ
ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪಿನಿಂದ
ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪ
ರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ
ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥ
ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾ
1 ತೋಲಾ, 5 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆ
ತ್ತದೆ. ಉಪಯೋಗಿಸಬೇಕಾಗಿ ವಿನಂತಿ

ವಲ್ಲಭದಾಸ್ ತೇಜ್‌ಪಾಲ್

ಎ. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮು